ದಿನಾಂಕಃ 18.10.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟೀಸವಾಲು: ಎದುರುದಾರರ ಪರ ಶ್ರೀ. ಎಸ್ ಜಿ ಟಿ ವಕೀಲರಿಂದ.</u>

ನಾನು ಐಟಿಐ ಪದವಿಧರನು ಇರುತ್ತೇನೆ. ದೂರನ್ನು ನಾನೇ ಸ್ವತಃ ನೀಡಿರುತ್ತೇನೆ. ನಾನು ದಿನಾಂಕ 09-08-2023 ರಂದು ದೂರು ನೀಡಲು ಹೋಗಿದ್ದು ಇತ್ತು. ದೂರನ್ನು ಬರೆಯಲು ಮಾಹಿತಿ ಯಾರು ನನಗೆ ನೀಡಿಲ್ಲ. ನಾನು ಘಟನಾ ಸ್ಥಳದಲ್ಲಿ ಹಾಜರಿದ್ದು, ಅಲ್ಲಿ ಕಂಡದ್ದನ್ನು ದೂರಿನಲ್ಲಿ ನಮೂದಿಸಿ ದೂರು ನೀಡಿರುತ್ತೇನೆ. ಮೃತ ರೇಣುಕಾ ನನ್ನ ಸಂಬಂಧಿಕಳಾಗಬೇಕು ಎಂದರೆ ಸರಿಯಲ್ಲ.

2. ನನ್ನ ಸ್ವಂತ ಊರು ತೋಟದ ಯಲ್ಲಾಪುರ ಇರುತ್ತದೆ. ತೋಟದ ಯಲ್ಲಾಪುರ ಗ್ರಾಮ ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡು ಇರುತ್ತದೆ ಎಂದರೆ ಸರಿ. ನಮ್ಮ ಮನೆಗೂ ಮತ್ತು ಆಗಿದೆ ಎನ್ನಲಾದ ಘಟನಾ ಸ್ಥಳಕ್ಕೂ 500 ಮೀಟರ ಅಂತರ ಇರುತ್ತದೆ. ಅಪಘಾತವನ್ನು ನಾನು ಕಣ್ಣಾರೆ ಕಂಡಿಲ್ಲ ಎಂದರೆ ಸರಿಯಲ್ಲ. ಬಸ್ಸು ಎಕ್ಸೆಲ್ ಕಟ್ ಆಗಿ ರಸ್ತೆಯ ಬದಿ ನಿಂತಿತ್ತು ಎಂದರೆ ಸರಿಯಲ್ಲ, ಸಾಕ್ಷಿ ರಸ್ತೆಯ ಮಧ್ಯೆ ನಿಂತಿತ್ತು ಎಂದು ನುಡಿಯುತ್ತಾರೆ. ರಾಷ್ಟ್ರೀಯ ಹೆದ್ದಾರಿಯ ಅಗಲ ಹೇಳಲು ಬರುವುದಿಲ್ಲ. ಬಸ್ಸು ಎಡಬದಿಯ ರಸ್ತೆಯಲ್ಲಿ ನಿಂತಿತ್ತು ಎಂದರೆ ಸರಿ. ಹಾಗೇ ಬಸ್ಸು ನಿಂತ ಬಗ್ಗೆ ಸೂಚನೆ ನೀಡಲು ಒಂದು ಟಾಯರ್ ಇಟ್ಟಿದ್ದರು ಎಂದರೆ ಸರಿ. ಟಾಯರ್ ನ್ನು ಬಸ್ಸಿನಿಂದ 5-6 ಮೀಟರ ಅಂತರದಲ್ಲಿ ಇಟ್ಟಿದ್ದರು. ಬಸ್ಸು ಹಿಂದೆ ಗೊತ್ತಾಗದ ಹಾಗೇ ಇಟ್ಟಿದ್ದ ಟಾಯರ್ ಗೆ ಅಪಘಾತಪಡಿಸಿ ರಸ್ತೆಯ ಮೇಲೆ ಬಿದ್ದಿದ್ದು ಅಂತಾ ದೂರಿನಲ್ಲಿ ಹೇಳಿ ಬರೆದಿದ್ದೇನೆ ಎಂದರೆ ಸರಿ. ಅಪಘಾತವು ಟಾಯರ್ ಗೆ ದ್ವಿಚಕ್ರ ವಾಹನ ಡಿಕ್ಕಿಪಡಿಸಿದ ಮೇರೆಗೆ ಆಗಿರುತ್ತದೆ ಎಂದು ದೂರಿನಲ್ಲಿ ಬರೆಸಿರುತ್ತೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಮೊದಲಿಗೆ ಟಾಯರ್ ಗೆ ಡಿಕ್ಕಿಪಡಿಸಿ ನಂತರ ಬಸ್ಸಿಗೆ ದ್ವಿಚಕ್ರ ವಾಹನ ಡಿಕ್ಕಿ ಮಾಡಿರುತ್ತದೆ ಎಂದು ನುಡಿಯುತ್ತಾರೆ. ಟಾಯರ್ ಗೆ ಡಿಕ್ಕಿಪಡಿಸಿದ್ದರಿಂದ ಮೃತರು ಕೆಳಗೆ ಬಿದ್ದು ತೀರಿಕೊಂಡಿರುತ್ತಾರೆ ಎಂದರೆ ಸರಿ. ದ್ವಿಚಕ್ರ ವಾಹನದ ಚಾಲಕನಿಗೆ ಬಸ್ಸಿಗೆ ದ್ವಿಚಕ್ರ

ವಾಹನ ಡಿಕ್ಕಿಪಡಿಸಿದ್ದರಿಂದ ಸಣ್ಣ ಪುಟ್ಟ ಗಾಯ ಆಗಿದ್ದವು. ಅಪಘಾತವಾದಾಗ ನಾನು ನನ್ನ ದ್ವಿಚಕ್ರ ವಾಹನದ ಮೇಲೆ ಹೊರಟಿದ್ದು ಇತ್ತು. ನಾನು ತೋಟದ ಯಲ್ಲಾಪುರ ಗ್ರಾಮದಿಂದ ಹಾವೇರಿಯ ಕಡೆಗೆ ಹೊರಟ್ಟಿದ್ದು ಇತ್ತು. ನಾನು ಪ್ರತಿ ಗಂಟೆಗೆ 20-30 ಕೀ.ಮೀ. ವೇಗದಲ್ಲಿ ದ್ವಿಚಕ್ರ ವಾಹನ ಚಲಾಯಿಸುತ್ತಿದ್ದೆ. ಅಪಘಾತವಾದ ವಾಹನ ಎಷ್ಟು ವೇಗವಾಗಿ ಹೊರಟಿತ್ತು ಎಂದು ಹೇಳಲು ಬರುವುದಿಲ್ಲ. ಅಪಘಾತ ಸ್ಥಳವು ಜನಜಂಗುಳಿಯಿಂದ ಕೂಡಿದ ಸ್ಥಳ ಅಲ್ಲ ಎಂದರೆ ಸರಿ. ನಾನು ಘಟನಾ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಮೃತ ರೇಣುಕಾ ಇವಳ ಕುಟುಂಬಕ್ಕೆ ಪರಿಹಾರ ದೊರೆಯಬೇಕು ಎಂಬ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಬರೆದ ಸಂಗತಿಗಳ ಮಾಹಿತಿ ನನಗೆ ಇಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ಸದರಿ ಸಾಕ್ಷಿದಾರರ ಸಾಕ್ಷ್ಯವನ್ನು ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ).